ಓ ಎಸ್ ನಂಃ 394/2022
ಪಿ.ಡಬ್ಲ್ಯೂ.1 (ರಾಜಶ್ರೀ)

ದಿನಾಂಕ: 12-08-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀಸವಾಲುಃ ಶ್ರೀ.ಎಮ್.ಆರ್.ಬಿ. ಪ್ರತಿವಾದಿಯರ ಪರ ವಕೀಲರಿಂದಃ</u>

7. ಖರೀದಿ ಕರಾರು ಪತ್ರ ಆಗುವ ಸಮಯದಲ್ಲಿ ಹಿರಿಯರಾಗಿ ಮಹಾದೇವ ಭೀಮಪ್ಪ ನಾಯ್ಕು, ಭೀಮಪ್ಪ ನಾಯ್ಕು, ಸರಸ್ವತಿ ಮಹಾದೇವ ನಾಯ್ಕು ಇವರುಗಳು ಇದ್ದರು. ಮಹಾದೇವ ಭೀಮಪ್ಪ ನಾಯ್ಕು ಎಂದರೆ ಈ ದಾವೆಯ ಪ್ರತಿವಾದಿ ಎಂದರೆ ಸರಿ. ಸದರಿ ಸರಸ್ವತಿ 1 ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ. ಸದರಿಯವರನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿ ಮೇಲೆ ಹೇಳಿದ ಭೀಮಪ್ಪ ನಾಯ್ಕು ಇವರ ಮಗಳು ಎಂದರೆ ಸರಿ. 2 ನೇ ಪ್ರತಿವಾದಿ ಖರೀದಿ ಕರಾರು ಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ಸರಿ.

8. ನಿಪಿ-2 ರಲ್ಲಿ ಸದರಿ ಜಮೀನು ಬಾಗಾಯತ ಜಮೀನು ಆ ಜಮೀನಿನಲ್ಲಿ ಕಬ್ಬು ಬೆಳೆಯುತ್ತಾರೆ ಹಾಗೂ ಕಾಲುವೆಯಿಂದ ನೀರಾವರಿ ಸೌಲಭ್ಯ ಇದೆ ಎಂದು ಬರೆದಿದ್ದಾರೆ ಎಂದರೆ ಅದು ಸುಳ್ಳು ಬರೆದಿದ್ದಾರೆ ಎಂದು ಹೇಳುತ್ತಾರೆ. ನಿಪಿ-2 ರಲ್ಲಿ ಕಾಲುವೆಯಿಂದ ನೀರಾವರಿ ಮೂಲ ಇದೆ ಎಂದು ಮಹಾದೇವ ಭೀಮಪ್ಪ ನಾಯ್ಕು ಇವರು ಬರೆಸಿರುತ್ತಾರೆ. ಪ್ರತಿ ವರ್ಷ ಗ್ರಾಮ ಲೆಕ್ಕಾಧಿಕಾರಿಗಳು ಜಮೀನುಗಳಿಗೆ ಭೇಟಿ ಕೊಟ್ಟು ಆ ಜಮೀನುಗಳಲ್ಲಿ ಏನು ಬೆಳೆಯುತ್ತಾರೆ ಹಾಗೂ ನೀರಾವರಿ ಮೂಲ ಏನು ಇದೆ ಎಂದು ಬರೆದುಕೊಂಡು ಹೋಗುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-3 ರಲ್ಲಿ ನೀರಾವರಿ ಮೂಲ ಬಾಂವಿ ಮತ್ತು ಕೊಳವೆ ಬಾಂವಿ ಎಂದು ಬರೆಯಲಾಗಿದೆ ಎಂದರೆ ಬಾಂವಿ ಮಾತ್ರ ಇದೆ ಕೊಳವೆ ಬಾಂವಿ ಇಲ್ಲ ಎಂದು ಹೇಳುತ್ತಾರೆ.

9. ನಿಪಿ-1 ರಲ್ಲಿ ನೀರಾವರಿ ಜಮೀನು ಎಂದು ಬರೆಯಲಾಗಿದೆ ಎಂದರೆ ಸರಿ. ನಿಪಿ-7 ರ ನೋಟೀಸು ನಾನು ನಮ್ಮ ವಕೀಲರಿಗೆ ಕೊಟ್ಟ ಮಾಹಿತಿಯ ಪ್ರಕಾರ ತಯಾರ ಮಾಡಿದ್ದಾರೆ ಎಂದರೆ ಸರಿ. ಕರಾರು ಪತ್ರ ಆದ ನಂತರ ನಿಪಿ-7 ರ ಪ್ರಕಾರ ಪ್ರತಿವಾದಿಯರಿಗೆ ನಾವು ಮೊದಲ ಬಾರಿಗೆ ನೋಟೀಸು ಕೊಟ್ಟಿರುತ್ತೇವೆ ಎಂದರೆ ಸರಿ. ನಿಪಿ-7 ರಲ್ಲಿ ದಿನಾಂಕ 26.07.2017 ರಂದು ಭೀಮನಾಯ್ಕು ಹುಚ್ಚಪ್ಪ ನಾಯ್ಕು ಇವರು ಖರೀದಿ ಕೊಡಲು ಒಪ್ಪಿ ನಮ್ಮ ಕಡೆಯಿಂದ ಮುಗಂಡ ದುಡ್ಡು ತೆಗೆದುಕೊಂಡಿದ್ದಾರೆ ಎಂದು ಬರೆಸಿದ್ದೇನೆ ಎಂದರೆ ಸರಿ. ದಿನಾಂಕ 26.07.2017 ರಂದು ನಮ್ಮ ಮನೆಯಲ್ಲಿ ಇದ್ದ ದುಡ್ಡು ನಾನು ತೆಗೆದುಕೊಂಡು ಬಂದಿದ್ದೆ. ದಿನಾಂಕ 26.07.2017 ರಂದು ನಾವು ದುಡ್ಡು ಕೊಡುವಾಗ ಬಸಪ್ಪ ಹಾಲನ್ನವರ, ವರುಶಂಕರ ತಿಗಡಿ, ದೀಪಕ ಕಲ್ಲೋಳಿ, ಚಿನ್ನವ್ವ ಕಲ್ಲೋಳಿ ಇವರುಗಳು ಇದ್ದರು. ಈ ಮೇಲೆ ಹೇಳಿದವರು ನಿಪಿ-1 ರ ಖರೀದಿ ಕರಾರ ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿಲ್ಲ ಎಂದರೆ ಸರಿ. ದಿನಾಂಕ 26.07.2017 ರಂದು ನಾವು ದುಡ್ಡು ಕೊಟ್ಟಿದ್ದನ್ನು ಹೊರತುಪಡಿಸಿ ಬೇರೆ ದಿನ ನಾವು ಪ್ರತಿವಾದಿಯರಿಗೆ ಯಾವುದೇ ದುಡ್ಡು ಕೊಟ್ಟಿಲ್ಲ ಎಂದರೆ ಸರಿ.

10. ನಿಪಿ-1 ರ ಕರಾರು ಪತ್ರವು 26.07.2017 ರಂದು ಬರೆಯಲಾಗಿದೆ. ನಾವು ದುಡ್ಡನ್ನು ನಿಪಿ-1 ನ್ನು ಬರೆದವರ ಸಮಕ್ಷಮ ಹಾಗೂ ನಿಪಿ-1 ರ ಸಾಕ್ಷಿದಾರರ ಸಮಕ್ಷಮ ಕೊಟ್ಟಿಲ್ಲ ಆದರೆ ಮನೆಯಲ್ಲಿ ಕೊಟ್ಟಿರುತ್ತೇವೆ. ದಿನಾಂಕ 26.07.2017 ರಂದು ನಾವು ಪ್ರತಿವಾದಿಯರಿಗೆ ದುಡ್ಡು ಕೊಟ್ಟಿದ್ದೆವೆ ಎಂದು ಹೇಳಿ ನಿಪಿ-1 ಕ್ಕೆ ನಾನು, ಪ್ರತಿವಾದಿಯರು ಹಾಗೂ ಸಾಕ್ಷಿದಾರರು ಸಹಿ ಮಾಡಿರುತ್ತಾರೆ. ದಿನಾಂಕ 26.07.2017 ರಂದು ನಾನು ದುಡ್ಡು ಕೊಟ್ಟಿದ್ದೇನೆ ಖರೀದಿ ಪತ್ರ ಬರೆದುಕೊಡಿ ಎಂದು ಈ ದಾವೆಯನ್ನು ಸಲ್ಲಿಸಿದ್ದೇನೆ. ಇದೇ ಮಾಹಿತಿಯನ್ನು ನಾವು ನಮ್ಮ ವಕೀಲರಿಗೂ ಸಹ ಕೊಟ್ಟಿದ್ದೇವು ಎಂದು ಸರಿ. ದಿನಾಂಕ 26.07.2017 ನ್ನು

ಹೊರತುಪಡಿಸಿ ದಾವಾ ಆಸ್ತಿಗಳ ಕುರಿತು ಬೇರೆ ವ್ಯವಹಾರ ಆಗಿಲ್ಲ ಎಂದು ಹೇಳಿ ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿದ್ದೇವೆ ಎಂದರೆ ಸರಿ.

11. ನಿಪಿ-1 ನ್ನು ಸಾಕ್ಷಿದಾರರಿಗೆ ತೋರಿಸಿದ್ದು ನಿಪಿ-1 ರಲ್ಲಿ ದಿನಾಂಕ 26.07.2017 ರಂದು ನಾನು ಮೃತ ಭೀಮನಾಯ್ಕು ಇವರಿಗೆ ರೂ.5,16,000/- ಕೊಟ್ಟಿದ್ದೇನೆ ಎಂದು ಬರೆಯಲಾಗಿದೆ ಎಂದು ಹೇಳುತ್ತಾರೆ. ನಿಪಿ-1 ನ್ನು ದಿನಾಂಕ 26.07.2017 ರಂದು ತಯಾರು ಮಾಡಲಾಗಿದೆ ಎಂದರೆ ಸರಿ. ಮುಂದುವರೆದು 11.07.2017 ರಂದು ಕರಾರು ಪತ್ರ ಬರೆಸಲಾಗಿದೆ ಎಂದು ಹೇಳುತ್ತಾರೆ. ಮೃತ ಭೀಮನಾಯ್ಕು ಇವರಿಗೆ ರೂ.5,16,000/- ಮುಟ್ಟಿದೆ ಎಂದು ನಿಪಿ-1 ರಲ್ಲಿ ಬರೆಯಲಾಗಿದೆ. ನಿಪಿ-1 ರಲ್ಲಿ ಯಾರ ಸಮಕ್ಷಮ ಮತ್ತು ಎಲ್ಲಿ ಮೃತ ಭೀಮನಾಯ್ಕು ಇವರಿಗೆ ದುಡ್ಡು ಮುಟ್ಟಿದೆ ಎಂದು ಬರೆದಿಲ್ಲ.

12. ದಿನಾಂಕ 11.07.2017 ರಂದು ಮೃತ ಭೀಮಪ್ಪ ನಾಯ್ಕು ಇವರು ನಿಪಿ-1 ನ್ನು ಬರೆಸಿದ್ದರು. ಕರಾರು ಪತ್ರ ಬರೆದ 15 ದಿನದ ನಂತರ ನೋಂದಣಿಯಾಗಿದೆ ಎಂದರೆ ಸರಿ. ಸದರಿ 15 ದಿನದ ಅಂತರದಲ್ಲಿ ಗೋಕಾಕ ಉಪ-ನೋಂದಣಾಧಿಕಾರಿಗಳ ಕಚೇರಿಯಲ್ಲಿ ಸರಿಸುಮಾರು ಒಟ್ಟು 500 ದಾಖಲೆಗಳು ನೋಂದ ಆಗಿವೆ ಎಂದರೆ ಸರಿ. ದಾಖಲೆಗಳು ನೋಂದ ಆಗಬೇಕಾದಲ್ಲಿ ಸರ್ವರ್ ಚಾಲು ಇರಬೇಕು ಎಂದರೆ ಸರಿ. ಸರ್ವರ್ ಬ್ಯೂಸಿ ಇತ್ತು ಎಂದು ಹೇಳಿ ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. ಪ್ರಥಮ ಬಾರಿಗೆ ಸರ್ವರ್ ಬ್ಯೂಸಿ ಇತ್ತು ಎಂದು ಹೇಳುತ್ತಿದ್ದೇನೆ ಎಂದರೆ ಸರಿ. ದಿಃ11.07.2017 ರಂದು ಹಾಗೂ 26.07.2017 ರಂದು ನಾನು ಈ ಮೇಲೆ ಹೇಳಿದ ನಾಲ್ಕು ಜನರು ನಿಪಿ-1 ಕ್ಕೆ ಸಾಕ್ಷಿದಾರರಾಗಿ ವಹಿ ಮಾಡಿಲ್ಲ ಎಂದರೆ ಸರಿ. ಮನೆಯ ವ್ಯವಹಾರ ಇದೆ ಎಂದು ಭೀಮಪ್ಪ ನಾಯ್ಕು ಇವರು ಸಾಕ್ಷಿದಾರರ ಸಹಿ ಮಾಡಿಸಿರುವುದಿಲ್ಲ.

13. ಈಗ ಸಾಕ್ಷಿದಾರರಿಗೆ ದಿನಾಂಕ 26.07.2017 ನನ್ನ ಬಳಿ ರೂ.6,00,000/- ಆಗಲಿ ರೂ.5,16,000/- ನಗದು ದುಡ್ಡು ಇದ್ದ ಬಗ್ಗೆ ದಾಖಲೆ ಹಾಜರ ಮಾಡಿಲ್ಲ ಎಂದರೆ ಸರಿ. ನಾನು ಈ ಮೇಲೆ ಹೇಳಿದ ಸಾಕ್ಷಿದಾರರು ಬಸಪ್ಪ ಹಾಲನ್ನವರ ಬೆಟಗೇರಿ ಗ್ರಾಮದವರು, ವರಶಂಕರ ತಿಗಡಿ, ದೀಪಕ ಕಲ್ಲೋಳಿ ಹಾಗೂ ಚಿನ್ನವ್ವ ಕಲ್ಲೋಳಿ ಗೋಕಾಕದವರು. ಈ ಮೇಲೆ ಹೇಳಿದ ನಾಲ್ಕು ಜನರು ನನಗೆ ಪರಿಚಯಸ್ತರು ಇರುತ್ತಾರೆ. ನನ್ನ ಮದುವೆಯಾಗಿ 40 ವರ್ಷಗಳಾಗಿದ್ದು ನನ್ನ ಮದುವೆ ಆದಾಗಿನಿಂದ ನಾನು ಗೋಕಾಕನಲ್ಲಿಯೆ ವಾಸ ಇದ್ದೇನೆ. ನನ್ನ ತಾಯಿ ಬಗರನಾಳ ಗ್ರಾಮದಲ್ಲಿ ಇರುತ್ತಾರೆ. ದಾವಾ ಆಸ್ತಿ ಉತಾರದಲ್ಲಿ ಜಂಟಿಯಾಗಿ ನನ್ನ ತಾಯಿಯ ಹೆಸರು ಇದೆ. ನನ್ನ ತಾಯಿ ನಿಪಿ-1 ರ ಖರೀದಿ ಕರಾರು ಪತ್ರಕ್ಕೆ ಸಹಿ ಮಾಡಿಲ್ಲ. ಭೀಮನಾಯ್ಕು ಇವರ ಜೀವಿತ ಕಾಲದಲ್ಲಿ ಭೀಮನಾಯ್ಕು ಮತ್ತು ನನ್ನ ತಾಯಿ ಹಾಗೂ ಮಹಾದೇವ ಇವರ ನಡುವೆ ಹಾಗೂ ಭೀಮನಾಯ್ಕು ಇವರ ಮರಣಾ ನಂತರ ನನ್ನ ತಾಯಿ ಮತ್ತು ಮಹಾದೇವ ಇವರ ನಡುವೆ ಪಾಲು ಆದ ಬಗ್ಗೆ ದಾಖಲೆ ಹಾಜರ ಮಾಡಿಲ್ಲ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)
ಓ ಹೇ ಕೇ ಸರಿ ಇದೆ

(ಉಮೇಶ ಎಸ್ ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ